# 29ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ
# ಬೆಂಗಳೂರು ನಗರ

ಸಿ.ಸಿ.ನಂ. 70892/2025

ಪಿಡಬ್ಲೂ.1 ದಿನಾಂಕ: 07.02.2026

ಸಿಡಬ್ಲೂ.1 ಪ್ರಮಾಣೀಕರಿಸಲಾಯಿತು.

| | |
|---|---|
| ಹೆಸರು | ದ್ರಿತಿ ವ್ಯಾಸ್ |
| ತಂದೆ ಹೆಸರು | ಪ್ರಧ್ಯುಮನ್ |
| ವಯಸ್ಸು | 25 ವರ್ಷಗಳು |
| ಉದ್ಯೋಗ | ಖಾಸಗಿ ಕೆಲಸ |
| ವಿಳಾಸ | ಮಾರತಹಳ್ಳಿ, ಬೆಂಗಳೂರು. |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**<u>ಮುಖ್ಯ ವಿಚಾರಣೆ ಹಿ.ಸ.ಸ.ಅ. ರವರಿಂದ</u>ಃ-**

ಆರೋಪಿ ಪರಿಚಯವಿದ್ದಾರೆ. ಚಾ.ಸಾ. 2 ಮತ್ತು 3 ನನ್ನ ಸ್ನೇಹಿತರು. ನನ್ನ ಮತ್ತು ಆರೋಪಿಯ ನಡುವೆ ಆದ ಬಾಯಿ ಮಾತಿನ ಗಲಾಟೆಯ ವಿಚಾರವಾಗಿ ದೂರನ್ನು ನೀಡಿದ್ದೆ. ಆರೋಪಿ ನನಗೆ ಹಿಂಭಾಲಿಸುವುದಿಲ್ಲ, ಅಡ್ಡಗಟ್ಟಿರುವುದಿಲ್ಲ, ಕೈಗಳಿಂದ ಹಲ್ಲೆ ಮಾಡಿರುವದಿಲ್ಲ, ನಾನು ಚಿಕಿತ್ಸೆ ಪಡೆದಿರುವುದಿಲ್ಲ, ಜೀವದ ದಮಕಿ ಹಾಕಿರುವದಿಲ್ಲ. ನ್ಯಾಯಾಧೀಶರ ಮುಂದೆ ಹೇಳಿರುವ ಹೇಳಿಕೆಯ ಬಗ್ಗೆ ನೆನಪಿರುವುದಿಲ್ಲ. ಪೊಲೀಸರಿಗೆ ಸ್ಥಳ ತೋರಿಸಿರುವುದಿಲ್ಲ. ಪಂಚನಾಮೆ ಕ್ರಮ ಜರುಗಿಸಿರುವುದಿಲ್ಲ. ಮುಂದುವರೆದ ಹೇಳಿಕೆ ನೀಡಿರುವದಿಲ್ಲ. ಪೋಲೀಸರಿಗೆ ಯಾವುದೇ ದಾಖಲಾತಿಗಳನ್ನು ನೀಡಿರುವದಿಲ್ಲ.

ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ.1 ಎಂದು ಗುರುತಿಸಲಾಯಿತು, ಸಾಕ್ಷಿಯ

ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ನಿಪಿ.1 ಮತ್ತು 2 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಹಿ.ಸ.ಸ.ಅ ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು).**

ಪಾಟೀ ಸವಾಲು ಹಿ.ಸ.ಸ.ಅ ರವರಿಂದಃ.

ದಿಃ 03.11.2024 ರಂದು ಬೆಳಗಿನ ಜಾವ 1.20 ನಿಮಿಷಕ್ಕೆ ನಾನು ನನ್ನ ಸ್ನೇಹಿತರಾದ ಚಾ.ಸಾ.6 ಮತ್ತು 7 ರವರೊಂದಿಗೆ ಈಜಿಪುರ ಮುಖ್ಯರಸ್ತೆಯಲ್ಲಿರುವ ವಿ.ಎಸ್.ಗಾರ್ಡನ್ ಬಾರ್ ಅಂಡ್ ರೆಸ್ಟೋರೆಂಟ್ ಮುಂಭಾಗ ರಸ್ತೆಯಲ್ಲಿ ನಡೆದುಕೊಂಡು ಮನೆಗೆ ಹೋಗುತ್ತಿರಬೇಕಾದರೆ ನನ್ನ ಎದುರಿಗೆ 1 ನೇ ಆರೋಪಿ ಬಂದು ಮಾತನಾಡಿಸಿದ್ದು, ಆಗ ಆರೋಪಿತರು ನನ್ನೊಂದಿಗೆ ಜಗಳ ತೆಗೆದು ನನ್ನನ್ನು ಮುಂದೆ ಹೋಗದಂತೆ 2 ಮತ್ತು 3 ನೇ ಆರೋಪಿತರು ಅಡ್ಡಗಟ್ಟಿ ನಿಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ನನ್ನೊಂದಿಗೆ ಜಗಳ ತೆಗೆದು 2 ನೇ ಆರೋಪಿ ಮರದ ರಿಪೀಸ್ ಪಟ್ಟಿ ತೆಗೆದುಕೊಂಡು ನನ್ನ ತಲೆಯ ಹಿಂಭಾಗಕ್ಕೆ ಹೊಡೆದು ಸಾಮಾನ್ಯ ಗಾಯಪಡಿಸಿ ಅದರಿಂದ ನಾನು ಕೆಳಗೆ ಬಿದ್ದಿರುತ್ತೇನೆ ಎಂದರೆ ಸರಿಯಲ್ಲ. ಆಗ 1 ಮತ್ತು 3 ನೇ ಆರೋಪಿತರು ಸೇರಿಕೊಂಡು ಕೈಗಳಿಂದ ನನ್ನ ಮುಖ, ಮೈಕೈ ಮೇಲೆ ಹಲ್ಲೆ ಮಾಡಿದ್ದರು ಎಂದರೆ ಸರಿಯಲ್ಲ. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದು, ಜೀವದ ಧಮಕಿ ಹಾಕಿದ್ದಾರೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ನಿಪಿ.1 ರಂತೆ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ತೋರಿಸಿದ ಸ್ಥಳಕ್ಕೆ ಪೊಲೀಸರು

ದಿಃ 04.11.2024 ರಂದು ನಿಪಿ.2 ರಂತೆ ಪಂಚರಾದ ಚಾ.ಸಾ.2 ಮತ್ತು 3 ರವರ ಸಮಕ್ಷಮ ಬೆಳಗ್ಗೆ 8.30 ರಿಂದ 9.30 ರವರೆಗೆ ಸ್ಥಳ ಪಂಚನಾಮೆ ಕ್ರಮ ಜರುಗಿಸಿ ಮರದ ರಿಪೀಸ್ ಪಟ್ಟಿಯನುನ ಅಮಾನತ್ತುಪಡಿಸಿಕೊಂಡು ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ದಿಃ 03.11.2024 ರಂದು ಪೊಲೀಸರಿಗೆ ಮುಂದುವರೆದ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಅದನ್ನು ನಿಪಿ.3 ಎಂದು ಗುರುತಿಸಲಾಯಿತು. ಪೋಲೀಸರು ನನಗೆ ನೋಟಿಸ್ ನೀಡಿ ಅದರಂತೆ ನಾನು ಈ ತೋರಿಸಿದಂತಹ ದಾಖಲೆಗಳನ್ನು ಸಹಿ ಮಾಡಿ ನೀಡಿರುತ್ತೇನೆ ನೆನಿಪಿಲ್ಲ. ಪ್ರಕರಣವನ್ನು ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿದ್ದೇನೆ ಎಂದರೆ ಸರಿ. ಆ ಕಾರಣದಿಂದಾಗಿ ನಿಪಿ.1 ರಿಂದ 3 ರಲ್ಲಿ ಬರೆದಿರುವ ವಿಚಾರಗಳು ಗೊತ್ತಿದ್ದರೂ ಸಹ ಗೊತ್ತಿಲ್ಲವೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ.** ಇಲ್ಲ.

**ಮರುವಿಚಾರಣೆ**ಃ ಇಲ್ಲ

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ

29ನೇ ಅ.ಮು.ಮ.ದಂ.ನ್ಯಾ,

ಬೆಂಗಳೂರು